# ದೂರಶಿಕ್ಷಣ ನಿರ್ದೇಶನಾಲಯ
## ಕನ್ನಡ ವಿಶ್ವವಿದ್ಯಾಲಯ, ಹಂಪಿ-೫೮೩೨೭೬
## Directorate of Distance Education
### Kannada University, Hampi-583276

# ಜನಸಾಮಾನ್ಯರಿಗೆ ಉನ್ನತ ಶಿಕ್ಷಣ

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ದೂರಶಿಕ್ಷಣ ನಿರ್ದೇಶನಾಲಯವು 2019–20ನೇ ಸಾಲಿಗಾಗಿ ಈ ಕೆಳಗಿನ ಕೋರ್ಸ್‌ಗಳಿಗೆ ಅರ್ಹರಿಂದ ಪ್ರವೇಶ ಅರ್ಜಿ ಆಹ್ವಾನಿಸಲಾಗಿದೆ.

**2.1 ಸ್ನಾತಕೋತ್ತರ ಡಿಪ್ಲೊಮ ಮತ್ತು ಡಿಪ್ಲೊಮ ಕಾರ್ಯಕ್ರಮ ಅಡಿಯಲ್ಲಿಯ ಶಿಕ್ಷಣಕ್ರಮಗಳು**
(ಪ್ರವೇಶಾರ್ಹತೆ : ಯಾವುದೇ ಪದವಿ/SSLC)

| ಕ್ರ ಸಂ | ಶಿಕ್ಷಣಕ್ರಮ | ಕೋಡ್ ಸಂಖ್ಯೆ |
|---|---|---|
| 1. | ಪುರಾತತ್ವ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ | 04 |
| 2. | ಪತ್ರಿಕೋದ್ಯಮ ಅಧ್ಯಯನ | 08 |
| **3.** | **ನಾಟಕ ಕಲೆ** | **11** |
| 4. | ಕನ್ನಡ ಸಾಹಿತ್ಯ | 16 |
| 5. | ಶಾಸನಶಾಸ್ತ್ರ ಅಧ್ಯಯನ | 19 |

**2.1.1 ಶಿಕ್ಷಣದ ಅವಧಿ**

ಯಾವುದೇ ಸ್ನಾತಕೋತ್ತರ ಡಿಪ್ಲೊಮ ಮತ್ತು ಡಿಪ್ಲೊಮ ಕೋರ್ಸ್‌ನ್ನು ಪೂರ್ಣಗೊಳಿಸಲು ಇರುವ ಕನಿಷ್ಠ ಅವಧಿ ಒಂದು ವರ್ಷಗಳು. ಗರಿಷ್ಠ ಅವಧಿ ನಿರ್ದಿಷ್ಟ ಶಿಕ್ಷಣಕ್ಕೆ ಸೇರಿದ ವರ್ಷದಿಂದ ಎರಡು ವರ್ಷಗಳು ಮಾತ್ರ. ಎರಡು ವರ್ಷಗಳ ಒಳಗೆ ಸ್ನಾತಕೋತ್ತರ ಡಿಪ್ಲೊಮ ಮತ್ತು ಡಿಪ್ಲೊಮ ಕೋರ್ಸ್‌ನ್ನು ಪೂರ್ಣಗೊಳಿಸದ ಅಭ್ಯರ್ಥಿ ಮತ್ತೆ ಹೊಸದಾಗಿ ಪ್ರವೇಶ ಪಡೆಯಬೇಕಾಗುತ್ತದೆ.

**2.1.2 ಪ್ರವೇಶ ಶುಲ್ಕ ***

| ನಿಯಮ–1 ಮತ್ತು 2 | ಶುಲ್ಕ |
|---|---|
| ನೋಂದಣಿ ಶುಲ್ಕ – | ರೂ.1,000/– |
| ಪ್ರವೇಶ ಶುಲ್ಕ | ರೂ.2,000/– |
| ಕಲಿಕಾ ಸಾಮಗ್ರಿ ಶುಲ್ಕ | ರೂ.3,000/– |
| ಕೋರ್ಸ್/ಬೋಧನಾ ಶುಲ್ಕ | ರೂ.2,000/– |
| ಪರೀಕ್ಷಾ ಶುಲ್ಕ | ರೂ.1,000/– |
| ಹೊರ ರಾಜ್ಯದ ಪದವೀಧರರ ಅರ್ಹತಾ ಶುಲ್ಕ (ಹೊರರಾಜ್ಯದವರಿಗೆ ಮಾತ್ರ) | ರೂ.5,000/– |
| **ಒಟ್ಟು ಮೊತ್ತ** | **ರೂ.14,000/–** |

** ಪ್ರವೇಶ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ, ಹಿಂದುಳಿದ, ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಎಸ್.ಎಸ್.ಪಿ. ಶಿಷ್ಯವೇತನ ಪೋರ್ಟಲ್ ತಂತ್ರಾಂಶದ ಮೂಲಕ ಶುಲ್ಕ ಮರುಪಾವತಿ ಪಡೆಯಲು ಮತ್ತು ವಿಕಲಾಂಗ ಚೇತನ ವಿದ್ಯಾರ್ಥಿಗಳು ಸಂಬಂಧಪಟ್ಟ ಇಲಾಖೆಯ ನಿಯಮಗಳಂತೆ ಶುಲ್ಕ ಮರುಪಾವತಿ ಪಡೆಯಲು ಅವಕಾಶವಿರುತ್ತದೆ.*

**2.1.3 ಪರೀಕ್ಷಾ ಶುಲ್ಕ**

| ವಿವರಗಳು | ಶುಲ್ಕ |
|---|---|
| ಎಲ್ಲಾ ಕೋರ್ಸ್‌ನ ಎಲ್ಲಾ ಪತ್ರಿಕೆಗಳಿಗೆ | ರೂ.1000/– |
| ಒಂದು ಕೋರ್ಸ್‌ನ ಒಂದು ಪತ್ರಿಕೆಗೆ | ರೂ.200/– |
| ಪುನರ್ ಪರೀಕ್ಷೆ ಒಂದು ಕೋರ್ಸ್‌ನ ಒಂದು ಪತ್ರಿಕೆಗೆ | ರೂ.200/– |

**2.1.4 ಸಾಮಾನ್ಯ ನಿಯಮ**

ಎಲ್ಲಾ ಸ್ನಾತಕೋತ್ತರ ಡಿಪ್ಲೊಮ ಕೋರ್ಸ್‌ಗಳ ಪತ್ರಿಕೆ A ಯಿಂದ Dವರೆಗಿನ ಪ್ರತಿ ಕೋರ್ಸ್(ಪತ್ರಿಕೆ)ನಲ್ಲಿ ೧೦ ಅಂಕಗಳು ಆಂತರಿಕ ಮೌಲ್ಯಮಾಪನಕ್ಕಾಗಿ ಅಂದರೆ ಸಂಪರ್ಕ ಕಾರ್ಯಕ್ರಮ ಹಾಗೂ ಮೌಖಿಕ ಪರೀಕ್ಷೆ ಅಥವಾ ಗೃಹಲೇಖನಕ್ಕಾಗಿ ಸಾಮಾನ್ಯವಾಗಿ ಕಾಯ್ದಿರಿಸಲಾಗಿದೆ. ಸಂಪರ್ಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗದವರು ಈ ೪ ಕೋರ್ಸ್(ಪತ್ರಿಕೆ)ಗಳಲ್ಲಿ ತಲಾ ೧೦ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಪಡೆಯಲು ಎ೪ ಅಳತೆಯ ಕನಿಷ್ಠ ೧೦ ಪುಟಗಳ ೨ ಗೃಹಲೇಖನವನ್ನು ದೂರಶಿಕ್ಷಣ ನಿರ್ದೇಶನಾಲಯದ ಸಂಬಂಧಪಟ್ಟ ಅಧ್ಯಯನ ಕೇಂದ್ರದ ಮಾರ್ಗಸೂಚಿಯ ಮೇರೆಗೆ ಆಯಾ ಕೋರ್ಸ್(ಪತ್ರಿಕೆ)ಗಳಲ್ಲಿಯ ಅಂಶಗಳನ್ನು ಓದಿ ಮನನಮಾಡಿಕೊಂಡು ಸ್ವಹಸ್ತದಿಂದ ಬರೆದು ವಾರ್ಷಿಕ ಪರೀಕ್ಷೆಯ ಮುನ್ನ ತಪ್ಪದೇ ಮೌಲ್ಯಮಾಪನಕ್ಕಾಗಿ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಇನ್ನುಳಿದಂತೆ ಎಲ್ಲ ಸ್ನಾತಕೋತ್ತರ ಡಿಪ್ಲೊಮ ಶಿಕ್ಷಣಕ್ರಮದ ಕೋರ್ಸ್‌ನ ಪತ್ರಿಕೆ Aಯಿಂದ Dವರೆಗಿನ ಪ್ರತಿ ಕೋರ್ಸ್(ಪತ್ರಿಕೆ)ನಲ್ಲಿ ತಲಾ ೯೦ ಅಂಕಗಳ ೩ ಗಂಟೆ ಅವಧಿಯ ಲಿಖಿತ ವಾರ್ಷಿಕ ಪರೀಕ್ಷೆ ಕಡ್ಡಾಯ. ಉತ್ತೀರ್ಣ ಹೊಂದಲು ಪ್ರತಿ ಕೋರ್ಸ್‌ನಲ್ಲಿ ಆಂತರಿಕ ಅಂಕಗಳನ್ನು ಸೇರಿ ಸರಾಸರಿ ೪೦% ಅಂಕಗಳನ್ನು ಗಳಿಸುವುದು ಕಡ್ಡಾಯವಾಗಿರುತ್ತದೆ. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಡಿಪ್ಲೊಮದ ಎರಡು ಪತ್ರಿಕೆಗಳು ಈ ಸಾಮಾನ್ಯ ನಿಯಮಕ್ಕೆ ಅನ್ವಯಿಸುತ್ತವೆ. ಉಳಿದಂತೆ ಇರುವ ೩,೪,೫ರ ಪತ್ರಿಕೆಗೂ (ಲಿಖಿತ ಮತ್ತು ಆಂತರಿಕ ಅಂಕಗಳು ಸೇರಿದಂತೆ) ಮೇಲಿನ ನಿಯಮವೇ ಅನ್ವಯಿಸುತ್ತದೆ.

ಈ ಕೆಳಗಿನ ಶಿಕ್ಷಣಕ್ರಮಗಳು ಡಿಪ್ಲೊಮ ಮತ್ತು ಸ್ನಾತಕೋತ್ತರ ಡಿಪ್ಲೊಮಗಳನ್ನು ಒಳಗೊಂಡಿರುತ್ತವೆ. ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆಯ ಮೇಲೆ ಪ್ರವೇಶ ಪಡೆದು ಅಧ್ಯಯನ ಪೂರ್ಣಗೊಳಿಸಿದವರಿಗೆ ಡಿಪ್ಲೊಮ ಪ್ರಮಾಣಪತ್ರ ಮತ್ತು ಯಾವುದೇ ಸ್ನಾತಕ ಪದವಿ ವಿದ್ಯಾರ್ಹತೆಯ ಮೇಲೆ ಪ್ರವೇಶ ಪಡೆದು ಅಧ್ಯಯನ ಪೂರ್ಣಗೊಳಿಸಿದವರಿಗೆ ಸ್ನಾತಕೋತ್ತರ ಡಿಪ್ಲೊಮ ಪ್ರಮಾಣ ಪತ್ರವನ್ನು ನೀಡಲಾಗುವುದು.

**2.2 ಸ್ನಾತಕೋತ್ತರ ಡಿಪ್ಲೊಮ ಮತ್ತು ಡಿಪ್ಲೊಮ ಕಾರ್ಯಕ್ರಮ ಅಡಿಯಲ್ಲಿಯ ಶಿಕ್ಷಣಕ್ರಮಗಳು**

**(ಪ್ರವೇಶಾರ್ಹತೆ : ಯಾವುದೇ ಪದವಿ/SSLC)**

**2.2.6 ನಾಟಕ ಕಲೆ ಡಿಪ್ಲೊಮ**

| ಕೋರ್ಸ್ ಸಂಕೇತ | ಕೋರ್ಸಿನ ಶೀರ್ಷಿಕೆ | ಅಂಕಗಳು | | | |
|---|---|---|---|---|---|
| | | ಶ್ರೇಯಾಂಕ | ಲಿಖಿತ | ಆಂತರಿಕ | ಒಟ್ಟು |
| 11A | ಆಂಗಿಕ ಮತ್ತು ವಾಚಿಕ (ದೇಹ ಮತ್ತು ಧ್ವನಿ) | 6 | 90 | 10 | 100 |
| 11B | ಆಹಾರ್ಯ (ತಂತ್ರಕೌಶಲ) | 6 | 90 | 10 | 100 |
| 11C | ಸಾತ್ವಿಕ (ಸೈದ್ಧಾಂತಿಕ ಚಿಂತನೆಗಳು) | 6 | 90 | 10 | 100 |
| 11D | ಕನ್ನಡ ಸಾಹಿತ್ಯ ಮತ್ತು ನಾಟಕ ಪ್ರಜ್ಞೆ | 6 | 90 | 10 | 100 |
| 11E | ಅ. ಪ್ರಯೋಗ | 2 | – | 50 | 50 |
| | ಆ. ಮೌಖಿಕ ಪರೀಕ್ಷೆ | 2 | – | 25 | 25 |
| | ಇ. ಸಂಪ್ರಬಂಧ | 2 | – | 25 | 25 |
| | **ಒಟ್ಟು ಅಂಕಗಳು** | **30** | **360** | **140** | **500** |

ಪ್ರಯೋಗ, ಸಂಪ್ರಬಂಧ ವರದಿ

**೧೧E ಕೋರ್ಸು(ಪತ್ರಿಕೆ) ೫೦ ಅಂಕಗಳ ಪ್ರಯೋಗ ಮತ್ತು ಎಳ ಅಳತೆಯ ಕನಿಷ್ಠ ೧೫ ಮತ್ತು ೨೫ ಪುಟಗಳ ೨೫ ಅಂಕಗಳ ಸಂಪ್ರಬಂಧ ಹಾಗೂ ೨೫ ಅಂಕಗಳ ಮೌಖಿಕ ಪರೀಕ್ಷೆಯನ್ನು ಒಳಗೊಂಡಿರುತ್ತದೆ.**

ದೂರಶಿಕ್ಷಣ ನಿರ್ದೇಶನಾಲಯದ ಮಾರ್ಗದರ್ಶನದ ಮೇರೆಗೆ ಅಭ್ಯರ್ಥಿಯು ವಿವಿಧ ನಾಟಕಗಳಿಗೆ ಸಂಬಂಧಿಸಿದಂತೆ ವಿಷಯಗಳನ್ನು ಪ್ರಯೋಗ ಮತ್ತು ಸಂಪ್ರಬಂಧ ರಚನೆಗೆ ಆಯ್ಕೆ ಮಾಡಿಕೊಳ್ಳಬೇಕು. ನಾಟಕ ಕಲೆ ಅಧ್ಯಯನವು ಮುಖ್ಯವಾಗಿ ಬಹುಶಿಸ್ತೀಯ ಅಧ್ಯಯನ ಎಂಬುದನ್ನು ಗಮನಿಸಿ, ಯಾವುದೇ ಜ್ಞಾನಕ್ಷೇತ್ರಕ್ಕೆ ಸಂಬಂಧಿಸಿದ ವಿಷಯವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಕೈಗೊಳ್ಳಬಹುದು.

ಸಂಪ್ರಬಂಧ ಮತ್ತು ಪ್ರಯೋಗ ವಿಷಯಕ್ಕೆ ಸಂಬಂಧಿಸಿದ ವಿಷಯವನ್ನು ಸಂಪರ್ಕ ಕಾರ್ಯಕ್ರಮದ ಒಳಗಾಗಿ ಅಥವಾ ಸಂಪರ್ಕ ಕಾರ್ಯಕ್ರಮ ಸಂದರ್ಭದಲ್ಲಿ ತಜ್ಞ/ಬೋಧಕರೊಂದಿಗೆ ಅಥವಾ ಅಧ್ಯಯನ ಮಂಡಳಿಯವರೊಂದಿಗೆ ಚರ್ಚಿಸಿ ಖಚಿತಪಡಿಸಿಕೊಂಡು ದೂರಶಿಕ್ಷಣ ನಿರ್ದೇಶನಾಲಯಕ್ಕೆ ತಿಳಿಸಬೇಕು. ಸಂಪ್ರಬಂಧದ ಎಳ ಅಳತೆಯ ಡಿಟಿಪಿ ಮಾಡಿದ ಕನಿಷ್ಠ ೨೫ ಪುಟಗಳ ವರದಿಯನ್ನು ಸ್ನಾತಕೋತ್ತರ ಡಿಪ್ಲೊಮ ಮತ್ತು ೧೫ ಪುಟಗಳ ವರದಿಯನ್ನು ಡಿಪ್ಲೊಮ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಯ ಮುನ್ನ ತಪ್ಪದೇ ಮೌಲ್ಯಮಾಪನಕ್ಕಾಗಿ ೨ ಪ್ರತಿಗಳಲ್ಲಿ ಸಂಬಂಧಪಟ್ಟ ಅಧ್ಯಯನ ಕೇಂದ್ರದ ಮೂಲಕ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು. ಸಂಪರ್ಕ ಕಾರ್ಯಕ್ರಮ ಸಂದರ್ಭದಲ್ಲಿಯೇ ಪ್ರಯೋಗ ಮತ್ತು ಮೌಖಿಕ ಪರೀಕ್ಷೆಗಳು ಜರುಗುವುವು.

**ಸೂಚನೆ**

ಸ್ನಾತಕೋತ್ತರ, ಸ್ನಾತಕೋತ್ತರ ಡಿಪ್ಲೊಮ ಮತ್ತು ಡಿಪ್ಲೊಮ ಶಿಕ್ಷಣ ಕಾರ್ಯಕ್ರಮಗಳ ಶಿಕ್ಷಣಕ್ರಮಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ತಮ್ಮ ಬೋಧನಾ/ಪ್ರವೇಶಾತಿ ಶುಲ್ಕದ ಡಿ.ಡಿ. ಸಂಖ್ಯೆ ಮತ್ತು ದಿನಾಂಕ ಇವುಗಳನ್ನು ಅರ್ಜಿಯಲ್ಲಿ ನಮೂದಿಸಬೇಕು. ಪ್ರವೇಶ ಸಂದರ್ಭದಲ್ಲಿ ಮೂಲ ಪ್ರಮಾಣ ಪತ್ರಗಳನ್ನು ಸಂಯೋಜಕರಿಗೆ ಸಾದರಪಡಿಸಿ ನೆರಳಚ್ಚು ಪ್ರಮಾಣ ಪತ್ರಗಳಿಗೆ ದೃಢೀಕರಿಸಿಕೊಂಡು ಅರ್ಜಿಯೊಂದಿಗೆ ಸಲ್ಲಿಸುವುದು.

ಕರ್ನಾಟಕ ರಾಜ್ಯದಲ್ಲಿಯ ಬ್ಯಾಂಕ್ ಆಫ್ ಇಂಡಿಯ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಈ ಬ್ಯಾಂಕುಗಳ ಯಾವುದೇ ಶಾಖೆಯಲ್ಲಿ ಹೊಸಪೇಟೆಯಲ್ಲಿ ಶುಲ್ಕ ಪಾವತಿಯಾಗುವಂತೆ ಡಿ.ಡಿ. ಪಡೆದು ಸಲ್ಲಿಸಬಹುದು. ಡಿ.ಡಿ. ಯನ್ನು **'ಹಣಕಾಸು ಅಧಿಕಾರಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ'** ಇವರ ಹೆಸರಿಗೆ ಪಡೆಯತಕ್ಕದ್ದು. ಡಿಡಿ ಜೊತೆಗೆ ಅಭ್ಯರ್ಥಿಯು ತನ್ನ ಹೆಸರು, ಆಯ್ದುಕೊಂಡಿರುವ ಶಿಕ್ಷಣಕ್ರಮ, ಅಧ್ಯಯನ ಕೇಂದ್ರ ಮತ್ತು ನೋಂದಣಿ ಸಂಖ್ಯೆ ಇವುಗಳನ್ನು ತಪ್ಪದೇ ನಮೂದಿಸಿ, ಭರ್ತಿ ಮಾಡಿದ ಅರ್ಜಿಯೊಂದಿಗೆ ಲಗತ್ತಿಸಿ ಕಳುಹಿಸಬೇಕು.

ಭರ್ತಿ ಮಾಡಿದ ಅರ್ಜಿಯ ಜೊತೆಗೆ ಶುಲ್ಕ ಪಾವತಿಸಿದ ಚಲನ್/ಡಿಡಿ, ಸಂಬಂಧಿಸಿದ ನೆರಳಚ್ಚು ಪ್ರತಿಗಳು (ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿರಬೇಕು), ಸ್ಟ್ಯಾಂಪ್ ಅಳತೆಯ ಮೂರು ಭಾವಚಿತ್ರಗಳನ್ನು ಅವುಗಳಲ್ಲಿ ಒಂದು ಭಾವಚಿತ್ರವನ್ನು ಪ್ರವೇಶ ಅರ್ಜಿಯ ಮೇಲೆ ಅಂಟಿಸಬೇಕು. ಉಳಿದ ಎರಡು ಭಾವಚಿತ್ರಗಳ ಹಿಂದುಗಡೆ ಅಭ್ಯರ್ಥಿಯ ಹೆಸರು, ಅರ್ಜಿ ಸಂಖ್ಯೆ, ಶಿಕ್ಷಣಕ್ರಮ ಇವುಗಳನ್ನು ಬರೆದು ಲಕೋಟೆಯೊಂದಕ್ಕೆ ಹಾಕಿ ಅರ್ಜಿಯ ಜೊತೆ **ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ 583276, ಹೊಸಪೇಟೆ ತಾಲೂಕು ಬಳ್ಳಾರಿ ಜಿಲ್ಲೆ** ಈ ವಿಳಾಸಕ್ಕೆ ನೋಂದಾಯಿತ ಅಂಚೆ/ಕೊರಿಯರ್/ಸ್ಪೀಡ್ ಪೋಸ್ಟ್ ಮೂಲಕ ಕಳುಹಿಸಬಹುದು ಅಥವಾ ಖುದ್ದಾಗಿ ಸಲ್ಲಿಸಬಹುದು. ಅಧ್ಯಯನ ಕೇಂದ್ರಗಳಲ್ಲಿ ಪ್ರವೇಶ ಪಡೆಯುವ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ದ್ವಿಪ್ರತಿಯಲ್ಲಿ ಸಂಬಂಧಪಟ್ಟ ಅಧ್ಯಯನ ಕೇಂದ್ರದ ಸಂಯೋಜಕರಿಗೆ ಸಲ್ಲಿಸಬಹುದು.

**ಶೈಕ್ಷಣಿಕ ಚಟುವಟಿಕೆಗಳ ದಿನಸೂಚಿ**

| ವಿವರಗಳು ಎಲ್ಲ ಶಿಕ್ಷಣಕ್ರಮಗಳಿಗೆ ಪ್ರವೇಶ | ತಿಂಗಳು ಮತ್ತು ದಿನಾಂಕ |
|---|---|
| ಪ್ರವೇಶ ಅರ್ಜಿ ಉಚಿತವಾಗಿ ಪಡೆಯಬಹುದು | -- |
| ದಂಡಶುಲ್ಕವಿಲ್ಲದೆ ಅರ್ಜಿ ಪಡೆದು ಸಲ್ಲಿಸಲು ಕೊನೆಯ ದಿನಾಂಕ | 23.03.2020 ರಿಂದ 30.06.2020 |
| ರೂ.250/- ದಂಡಶುಲ್ಕ ಸಹಿತ ಅರ್ಜಿ ಪಡೆದು ಸಲ್ಲಿಸಲು ಕೊನೆಯ ದಿನಾಂಕ | 01.07.2020 ರಿಂದ 31.07.2020 |
| **ಸ್ನಾತಕೋತ್ತರ ಪ್ರವೇಶ ಪೂರ್ವಸಿದ್ಧತಾ (Master Preparatory Programme) ಪರೀಕ್ಷೆ** (ನಿಯಮ-1ರ ವಿದ್ಯಾರ್ಥಿಗಳಿಗೆ ಮಾತ್ರ) | 15.08.2020 |
| ಎಲ್ಲಾ ಕೋರ್ಸ್‌ಗಳ ಸಂಪರ್ಕ ಕಾರ್ಯಕ್ರಮ | ಅಕ್ಟೋಬರ್/ನವೆಂಬರ್ 2020 |
| ನಿಯೋಜಿತ ಸಂಪ್ರಬಂಧ, ಗೃಹಲೇಖನ, ಇತ್ಯಾದಿ ವರದಿ ಸಲ್ಲಿಕೆ (ದಂಡಶುಲ್ಕವಿಲ್ಲದೆ) | 31.09.2020 |
| ರೂ.300/- ದಂಡಶುಲ್ಕದೊಂದಿಗೆ | 31.10.2020 |
| **ಪರೀಕ್ಷಾ ಶುಲ್ಕ ಪಾವತಿ** (ದಂಡ ಶುಲ್ಕವಿಲ್ಲದೆ) ಪರೀಕ್ಷಾ ಅರ್ಜಿಯೊಂದಿಗೆ ಒಂದು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಹಾಗೂ | 31.09.2020 |

| | |
|---|---|
| ಶುಲ್ಕ ಪಾವತಿ ಮಾಡಿದ ಎಲ್ಲಾ ರಸೀದಿಗಳ ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು. | |
| ರೂ.200/- ದಂಡಶುಲ್ಕದೊಂದಿಗೆ | 31.10.2020 |
| **ಎಲ್ಲಾ ಕೋರ್ಸ್‌ಗಳ ವಾರ್ಷಿಕ ಪರೀಕ್ಷೆ** | ಡಿಸೆಂಬರ್ 2020 |
| **ಪರೀಕ್ಷೆಗಳ ಫಲಿತಾಂಶ ಪ್ರಕಟಣೆ** | ಜನವರಿ 2021 |

ಮೇಲಿನ ಕೊನೆಯ ದಿನಾಂಕ ಮುಗಿದ ನಂತರ ಸಲ್ಲಿಕೆಯಾಗುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಕೇಂದ್ರ ಕಚೇರಿಯ ಪ್ರವೇಶಾತಿ ವಿಭಾಗ ಮತ್ತು ಅಧ್ಯಯನ ಕೇಂದ್ರಗಳಲ್ಲದೆ ಇದೇ ವಿಶ್ವವಿದ್ಯಾಲಯದ ಬೇರೆ ವಿಳಾಸಕ್ಕೆ/ವಿಭಾಗಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ. ಸ್ವೀಕೃತ ಅರ್ಜಿಗಳು ಮೇಲೆ ತಿಳಿಸಿದ ವಿಧಾನಗಳಲ್ಲಿ **ಭರ್ತಿ ಮಾಡಿಲ್ಲದಿದ್ದರೆ ಅವು ನಿರಾಕರಣೆಗೆ ಒಳಗಾಗುತ್ತವೆ.**

**3.10 ಪರೀಕ್ಷಾ ಕೇಂದ್ರಗಳು**

ಪರೀಕ್ಷಾ ಕೇಂದ್ರಗಳನ್ನು ನಿರ್ಣಯಿಸುವ ಹಕ್ಕನ್ನು ಕನ್ನಡ ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿದೆ. ವಿಶ್ವವಿದ್ಯಾಲಯವು ನಿಗದಿಪಡಿಸಿದ ಸ್ಥಳಗಳಲ್ಲಿ ಪರೀಕ್ಷೆಯನ್ನು ನಡೆಸಲಾಗುತ್ತದೆ. ಪರೀಕ್ಷೆಗಳು ವಿಶ್ವವಿದ್ಯಾಲಯದ ಆವರಣದಲ್ಲಿಯೂ ನಡೆಯುತ್ತದೆ. ಪರೀಕ್ಷಾ ವೇಳಾಪಟ್ಟಿ, ಮತ್ತು ಕೇಂದ್ರಗಳ ವಿವರಗಳು ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್ (www.kannadauniversity.org) ನಲ್ಲಿ ದೊರಕುತ್ತವೆ.

**3.11 ಇತರೆ ಶುಲ್ಕಗಳು** ರೂ.ಗಳಲ್ಲಿ

| | | |
|---|---|---|
| 1. | ಪರೀಕ್ಷಾ/ಅಧ್ಯಯನ ಕೇಂದ್ರ ಬದಲಾವಣೆ ಶುಲ್ಕ | 1,500/- |
| 2. | ಶಿಕ್ಷಣಕ್ರಮ(ವಿಷಯ) ಬದಲಾವಣೆ ಶುಲ್ಕ | 500/- |
| 3. | ಮರು ಮೌಲ್ಯಮಾಪನ ಶುಲ್ಕ (ಪ್ರತಿ ಪತ್ರಿಕೆಗೆ) | 500/- |
| 4. | ಸವಾಲು ಮೌಲ್ಯಮಾಪನ ಶುಲ್ಕ (ಪ್ರತಿ ಪತ್ರಿಕೆಗೆ) | 1,500/- |
| 5. | ಉತ್ತರಪತ್ರಿಕೆ(ಕೋರ್ಸ್) ವೀಕ್ಷಣೆ ಶುಲ್ಕ (ಪ್ರತಿ ಉತ್ತರಪತ್ರಿಕೆಗೆ) | 250/- |
| 6. | ಪ್ರತಿ ಉತ್ತರಪತ್ರಿಕೆಯ ಅಂಕಗಳ ಮರುಎಣಿಕೆ ಶುಲ್ಕ | 300/- |
| 7. | ನಕಲು ಅಂಕಪಟ್ಟಿ ಶುಲ್ಕ (ಪ್ರತಿ ವರ್ಷ ವಿಳಂಬ ಶುಲ್ಕ ರೂ.50/-) | 300/- |
| 8. | ಉತ್ತಮೀಕರಣಕ್ಕಾಗಿ ಪರೀಕ್ಷಾ ಶುಲ್ಕ (ಪ್ರತಿ ಪತ್ರಿಕೆಗೆ) | 200/- |
| 9. | ಕ್ರೋಢೀಕೃತ ಅಂಕಪಟ್ಟಿ ಶುಲ್ಕ (ಪ್ರತಿ ವರ್ಷ ವಿಳಂಬ ಶುಲ್ಕ ರೂ.50/-) | 300/- |
| 10. | ತಾತ್ಕಾಲಿಕ ತೇರ್ಗಡೆ/ನಡತೆ/ವ್ಯಾಸಂಗ ಪ್ರಮಾಣಪತ್ರ ಶುಲ್ಕ | 250/- |
| 11. | ವಲಸೆ ಪ್ರಮಾಣ ಪತ್ರ ಶುಲ್ಕ (ಪ್ರತಿ ವರ್ಷ ವಿಳಂಬ ಶುಲ್ಕ ರೂ.50/-) | 300/- |
| 12. | ಘಟಿಕೋತ್ಸವ ಪ್ರಮಾಣಪತ್ರ ಶುಲ್ಕ (ಪ್ರತಿ ವರ್ಷ ವಿಳಂಬ ಶುಲ್ಕ ರೂ.50/-) | 800/- |
| 13. | ನಕಲು ಗುರುತಿನ ಚೀಟಿ ಶುಲ್ಕ | 250/- |
| 14. | ಹೆಸರು ಬದಲಾವಣೆ ಶುಲ್ಕ | 500/- |
| 15. | ಎರಡು ವರ್ಷಗಳು ಬಿಟ್ಟ ನಂತರ ಮತ್ತೆ ಶಿಕ್ಷಣಕ್ಕೆ ಸೇರಬಯಸುವವರು ಪಾವತಿಸಬೇಕಾದ ಮರುನೋಂದಣಿ ಶುಲ್ಕ (ಪೂರ್ವಾನುಮತಿ ಪಡೆಯಬೇಕು) | 500/- |
| 16. | ಬೇಬಾಕಿ ಪತ್ರ | 250/- |
| 17. | ನೈಜತೆ ಪ್ರಮಾಣ ಪತ್ರ | 500/- |
| 18. | ವಿಳಂಬ ದಂಡ ಶುಲ್ಕ | |
| | 1 ಸಂಪರ್ಕ ತರಗತಿ ಶುಲ್ಕ (ಹಿಂದಿನ ಸಾಲಿನ ವಿದ್ಯಾರ್ಥಿಗಳಿಗೆ ಮಾತ್ರ) | 500/- |
| | 2. ಗೃಹಲೇಖನಗಳನ್ನು ತಡವಾಗಿ ಸಲ್ಲಿಸಿದರೆ | 300/- |
| | ಒಂದು ವರ್ಷ ಹಿಂದಿನವರಿಗೆ | 600/- |
| | ಎರಡು ವರ್ಷ ಅಥವಾ ಅದಕ್ಕಿಂತ ಹಿಂದಿನವರಿಗೆ | 1,000/- |

**3.11.1 ಶುಲ್ಕ ಪಾವತಿ**

1. ಪ್ರವೇಶ ಅರ್ಜಿಯೊಂದಿಗೆ ನಿಗದಿಪಡಿಸಿದ ಪ್ರವೇಶ ಶುಲ್ಕ ಹಾಗೂ ನೋಂದಣಿ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಬೇಕು.
2. ಪ್ರವೇಶ ಬಯಸಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು (ಪ.ಜಾ/ಪ.ಪಂ. ವಿದ್ಯಾರ್ಥಿಗಳೂ ಒಳಗೊಂಡು) ಅರ್ಜಿಯೊಂದಿಗೆ ಕಡ್ಡಾಯವಾಗಿ ನೋಂದಣಿ ಶುಲ್ಕ ಪಾವತಿಸಬೇಕು. ಅರ್ಜಿ ಸಲ್ಲಿಸಿ ನೋಂದಣಿ ಶುಲ್ಕ ಪಾವತಿಸದ ವಿದ್ಯಾರ್ಥಿಗಳ ಅರ್ಜಿಗಳು ಪ್ರವೇಶಕ್ಕೆ ಸ್ವೀಕೃತವಾಗುವುದಿಲ್ಲ.
3. ಅರ್ಜಿ ಸಲ್ಲಿಸಲು ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯವು ನಿಗದಿಪಡಿಸುವ ಕೊನೆಯ ದಿನಾಂಕದಂದು ಅಥವಾ ಆ ದಿನಾಂಕದೊಳಗೆ ಶಿಕ್ಷಣಕ್ರಮಕ್ಕೆ ನಿಗದಿಪಡಿಸಿರುವ ಶುಲ್ಕ ಪಾವತಿಸಬೇಕು.
4. ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯವು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಥವಾ ಮುಂಚೆ ಶುಲ್ಕ ಪಾವತಿ ಮಾಡದಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.
5. ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಪಾವತಿಸಲಾದ ಎಲ್ಲಾ ಬಗೆಯ ಶುಲ್ಕಗಳ ಚಲನ್/ಡಿಡಿಗಳ ನೆರಳಚ್ಚು ಪ್ರತಿಯನ್ನು ಎಚ್ಚರಿಕೆಯಿಂದ ಸಂರಕ್ಷಿಸುವುದು ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿರುತ್ತದೆ. ಪರೀಕ್ಷಾ ಪ್ರವೇಶಪತ್ರ, ಅಂಕಪಟ್ಟಿ ಮತ್ತಿತರೆ ದಾಖಲೆಗಳನ್ನು ಪಡೆಯುವ ಸಂದರ್ಭದಲ್ಲಿ ವಿದ್ಯಾರ್ಥಿ ಇವುಗಳನ್ನು ಸಲ್ಲಿಸಬೇಕು/ಸಾದರಪಡಿಸಬೇಕು.
6. ಪ್ರವೇಶಾತಿ ಅನುಮೋದನೆಗೊಂಡ ಮೇಲೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಶಾಶ್ವತ ನೋಂದಣಿ ಸಂಖ್ಯೆಯ 'ಗುರುತು ಪತ್ರ'ವನ್ನು ನೀಡಲಾಗುವುದು. ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದೊಂದಿಗೆ ವ್ಯವಹರಿಸುವ ಎಲ್ಲಾ ವ್ಯವಹಾರಗಳಿಗೂ ವಿದ್ಯಾರ್ಥಿಯು ನೋಂದಣಿ ಸಂಖ್ಯೆ ಮತ್ತು ಶಿಕ್ಷಣಕ್ರಮವನ್ನು ಉಲ್ಲೇಖಿಸಬೇಕು.

## <u>ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರಗಳು</u>

(1) **ಬೆಂಗಳೂರು ಜಿಲ್ಲೆ:** ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಾದೇಶಿಕ ಕಚೇರಿ, ನಂ.1. ಹಳೇ ಕಾನೂನು ಕಾಲೇಜು ಕಟ್ಟಡ, ಅರಮನೆ ರಸ್ತೆ, ಮೈಸೂರು ಬ್ಯಾಂಕ್ ವೃತ್ತ, **ಬೆಂಗಳೂರು–560009,** ✆ 080–22372388, 9448580064, (2) **ಬಾಗಲಕೋಟೆ ಜಿಲ್ಲೆ:** : 1. ವಾಸ್ತುಶಿಲ್ಪ ಶಿಲ್ಪಶಾಸ್ತ್ರ ಮತ್ತು ಪ್ರತಿಮಾಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರ, ಜೋಳಚಗುಡ್ಡ ಅಂಚೆ, ಬನಶಂಕರಿ, **ಬಾದಾಮಿ** ✆ 08357 32568, 9448580056 2. ಅಂತರಾಷ್ಟ್ರೀಯ ವಚನ ಸಾಹಿತ್ಯ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರ, **ಕೂಡಲಸಂಗಮ–587115** ✆ 08351 268292, 9482056907 (3) **ಚಾಮರಾಜನಗರ ಜಿಲ್ಲೆ:** ದೇಸಿ ಸಂಸ್ಕೃತಿ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರ, **ಕುರುಬನಕಟ್ಟೆ,** ಕೆಂಚನಪಾಳ್ಯ ಅಂಚೆ–571440, ಕೊಳ್ಳೇಗಾಲ ತಾಲೂಕು, ಚಾಮರಾಜನಗರ ಜಿಲ್ಲೆ ✆ 9739291217, 9902861355, 9008263509 (4) **ಶಿವಮೊಗ್ಗ ಜಿಲ್ಲೆ:** : ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರ, **ಕುಪ್ಪಳ್ಳಿ,** ಹಿರೇಕೂಡಿಗೆ ಅಂಚೆ–577126 ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ, ✆ 08265 218222, 9448900999 (5) **ರಾಯಚೂರು ಜಿಲ್ಲೆ:** : ಕನ್ನಡ ವಿಶ್ವವಿದ್ಯಾಲಯ, ವಿಸ್ತರಣಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣ, **ದೇವದುರ್ಗ, ರಾಯಚೂರು ಜಿಲ್ಲೆ** ✆ 9611220425 (6) **ಬೆಳಗಾವಿ ಜಿಲ್ಲೆ:** : ಡಾ. ಆ.ನೇ. ಉಪಾಧ್ಯೆ ವಿಸ್ತರಣಾ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಭರತೇಶ ಶಿಕ್ಷಣ ಸಂಸ್ಥೆ, ಹಳೆ ಪಿ.ಬಿ. ರಸ್ತೆ, **ಬೆಳಗಾವಿ,** ✆ 08312421513, 9945598224

## <u>ಕನ್ನಡ ವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರಗಳು</u>

(1) ಬಳ್ಳಾರಿ ಜಿಲ್ಲೆ: **:(031): ದೂರಶಿಕ್ಷಣ ನಿರ್ದೇಶನಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ 583276, ✆ 9481220945, :(032):** ವೀರಶೈವ ವಿದ್ಯಾವರ್ಧಕ ಸಂಘದ ಗಂಗಾವತಿ ಭಾಗ್ಯಮ್ಮ ಗ್ರಾಮೀಣ ಪದವಿ ಕಾಲೇಜು, **ಹೂವಿನಹಡಗಲಿ 583219,** ✆ 9880972541, 08399 240251 (2) **ಬೆಳಗಾವಿ ಜಿಲ್ಲೆ: :(022):** ಶ್ರೀ ವೃಷಭೇಂದ್ರ ಶಿಕ್ಷಣ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, **ಹಾರೂಗೇರಿ 591220,** ✆ 08331 257853, 9448163119 (3) **ಬೆಂಗಳೂರು ಜಿಲ್ಲೆ: (042):** ಮೈಸೂರು ಶಿಕ್ಷಣ ಸಂಸ್ಥೆಯ ರಂಗಶಾಲೆ, ಬ್ರಾಹ್ಮೀ ಕಿಶೋರ ಕೇಂದ್ರ, 10ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಮಲ್ಲೇಶ್ವರಂ, **ಬೆಂಗಳೂರು** 560003, ✆ 080 23347266, 98808 57321 (4) **ಬಿಜಾಪುರ ಜಿಲ್ಲೆ: :(071):** ಶ್ರೀ ಮುರುಘರಾಜೇಂದ್ರ ಶಿಕ್ಷಣ ಸಂಸ್ಥೆಯ ಶ್ರೀ ಸಂಗನಬಸವೇಶ್ವರ ಕಲಾ ಮಹಾವಿದ್ಯಾಲಯ, **ಕೂಡಗಿ** 586121 ✆ 08426 200058, 9901233487, **:(072):** ಕಾಯಕಯೋಗಿ ಗ್ರಾಮೀಣ ಸೇವಾದತ್ತಿ ವಿಶ್ವಸ್ಥ ಸಂಸ್ಥೆಯ ಜ್ಞಾನಗಂಗೋತ್ರಿ ದೂರಶಿಕ್ಷಣ ಅಧ್ಯಯನ ಕೇಂದ್ರ, ಹೇಮರೆಡ್ಡಿ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜು, **ತಿಡಗುಂದಿ** 586119, ✆ 94481 18593, 08352 253093, 235072, **(073):**ಗ್ರಾಮಾಂತರ ವಿದ್ಯಾವರ್ಧಕ ಸಂಘದ ಶ್ರೀ ಶಾಂತವೀರ ಕಲಾ ಮಹಾವಿದ್ಯಾಲಯ, **ಬಬಲೇಶ್ವರ** 586113, ಬಿಜಾಪುರ ಜಿಲ್ಲೆ ✆ 9448680312, 08352 260148 (5) **ಕಲಬುರಗಿ ಜಿಲ್ಲೆ: :(164):** ರೇಶ್ಮಿ ಎಜುಕೇಶನಲ್ ಅಂಡ್ ಚಾರಿಟೇಬಲ್ ಟ್ರಸ್ಟ್, ರೇಶ್ಮಿ ವಿದ್ಯಾಭವನ, ಸರಸ್ವತಿಪುರ, ಕುಸನೂರು ರಸ್ತೆ, ಗುಲ್ಬರ್ಗಾ ವಿಶ್ವವಿದ್ಯಾಲಯದ ಹಿಂದುಗಡೆ, **ಕಲಬುರಗಿ** 585106, ✆ 08472 265279, 94492 67524 (6) **ರಾಯಚೂರು ಜಿಲ್ಲೆ: :(241):** ವಿದ್ಯಾಶ್ರೀ ಶಿಕ್ಷಣ ಸಂಸ್ಥೆ, ಹೊಸ ಬಸ್ ನಿಲ್ದಾಣ ಹತ್ತಿರ, **ದೇವದುರ್ಗ** 584101, ✆ 99729 99246, 9448812503 (7). **ದಾವಣಗೆರೆ ಜಿಲ್ಲೆ: :(131):** ಮಾಲತೇಶ ಶಿಕ್ಷಣ ಸಂಸ್ಥೆ (ರಿ), ಎಂ.ಇ.ಎಸ್. ಗ್ರೂಪ್ ಆಫ್ ಇನ್ಸಿಟ್ಯೂಷನ್, ಆಂಜನೇಯ ಬಡಾವಣೆ, ಎಂ.ಸಿ.ಸಿ. 'ಬಿ' ಬ್ಲಾಕ್, **ದಾವಣಗೆರೆ** ✆ 080–23394326, 08192–221286, 98451 40948, 98804 36414,

## <u>ಕನ್ನಡ ವಿಶ್ವವಿದ್ಯಾಲಯದ ಸಮನ್ವಯ ಘಟಕಗಳು</u>

**ಬೆಳಗಾವಿ ಜಿಲ್ಲೆ:** ಕನ್ನಡ ವಿಶ್ವವಿದ್ಯಾಲಯದ ಸಮನ್ವಯ ಘಟಕ, ಎಸ್.ಆರ್.ಇ.ಎಸ್. ಪ್ರಥಮ ದರ್ಜೆ ಕಾಲೇಜು, **ಕಲ್ಲೋಳಿ,** ಬೆಳಗಾವಿ ಜಿಲ್ಲೆ ✆ 7892887561 (2) **ಕೊಪ್ಪಳ ಜಿಲ್ಲೆ:** ಕನ್ನಡ ವಿಶ್ವವಿದ್ಯಾಲಯದ ಸಮನ್ವಯ ಘಟಕ, ಗೌತಮಬುದ್ಧ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಗ್ರಾಮೀಣ ಅಭಿವೃದ್ಧಿ ಗ್ರಾಮೀಣ ಸಂಸ್ಥೆ, **ಕೊಪ್ಪಳ** ✆ 8660844011

## <u>ಕನ್ನಡ ವಿಶ್ವವಿದ್ಯಾಲಯದ ಪರೀಕ್ಷಾ ಕೇಂದ್ರಗಳು</u>

**ಬಳ್ಳಾರಿ ಜಿಲ್ಲೆ: :(031): ದೂರಶಿಕ್ಷಣ ನಿರ್ದೇಶನಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ 583276, ✆ 9481220945, (2) :(032):** ವೀರಶೈವ ವಿದ್ಯಾವರ್ಧಕ ಸಂಘದ ಗಂಗಾವತಿ ಭಾಗ್ಯಮ್ಮ ಗ್ರಾಮೀಣ ಪದವಿ ಕಾಲೇಜು, **ಹೂವಿನಹಡಗಲಿ 583219,** ✆ 9880972541, 08399 240251 (3) **ಬೆಳಗಾವಿ ಜಿಲ್ಲೆ: :(022):** ಶ್ರೀ ವೃಷಭೇಂದ್ರ ಶಿಕ್ಷಣ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, **ಹಾರೂಗೇರಿ 591220,** ✆ 08331 257853, 9448163119 (4) **ಬೆಂಗಳೂರು ಜಿಲ್ಲೆ: (042):** ಮೈಸೂರು ಶಿಕ್ಷಣ ಸಂಸ್ಥೆಯ ರಂಗಶಾಲೆ, ಬ್ರಾಹ್ಮೀ ಕಿಶೋರ ಕೇಂದ್ರ, 10ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಮಲ್ಲೇಶ್ವರಂ, **ಬೆಂಗಳೂರು** 560003, ✆ 080 23347266, 98808 57321 (5) **ಬಿಜಾಪುರ ಜಿಲ್ಲೆ: (073):**ಗ್ರಾಮಾಂತರ ವಿದ್ಯಾವರ್ಧಕ ಸಂಘದ ಶ್ರೀ ಶಾಂತವೀರ ಕಲಾ ಮಹಾವಿದ್ಯಾಲಯ, **ಬಬಲೇಶ್ವರ** 586113, ಬಿಜಾಪುರ ಜಿಲ್ಲೆ ✆ 9448680312, 08352 260148 (6) **ಕಲಬುರಗಿ ಜಿಲ್ಲೆ: :(164):** ರೇಶ್ಮಿ ಎಜುಕೇಶನಲ್ ಅಂಡ್ ಚಾರಿಟೇಬಲ್ ಟ್ರಸ್ಟ್, ರೇಶ್ಮಿ ವಿದ್ಯಾಭವನ, ಸರಸ್ವತಿಪುರ, ಕುಸನೂರು ರಸ್ತೆ, ಗುಲ್ಬರ್ಗಾ ವಿಶ್ವವಿದ್ಯಾಲಯದ ಹಿಂದುಗಡೆ, **ಕಲಬುರಗಿ** 585106, ✆ 08472 265279, 94492 67524 (7). **ದಾವಣಗೆರೆ ಜಿಲ್ಲೆ: :(131):** ಮಾಲತೇಶ ಶಿಕ್ಷಣ ಸಂಸ್ಥೆ (ರಿ), ಎಂ.ಇ.ಎಸ್. ಗ್ರೂಪ್ ಆಫ್ ಇನ್ಸಿಟ್ಯೂಷನ್, ಆಂಜನೇಯ ಬಡಾವಣೆ, ಎಂ.ಸಿ.ಸಿ. 'ಬಿ' ಬ್ಲಾಕ್, **ದಾವಣಗೆರೆ** ✆ 080–23394326, 08192–221286, 98451 40948, 98804 36414,

***ವಿ.ಸೂಚನೆ ದೂರಶಿಕ್ಷಣ ನಿರ್ದೇಶನಾಲಯವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳು, ಸೂಚನೆಗಳು, ಬದಲಾವಣೆಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ಕಡ್ಡಾಯವಾಗಿ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್‌ನ್ನು ಸಂಪರ್ಕಿಸುವುದು.***


**ಸಂಪರ್ಕ ವಿಳಾಸ**

ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ 583276

ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ, ದೂರವಾಣಿ: 9481220945 / 9448092737

ಇ–ಮೇಲ್ : dde.kuh@gmail.com, ವೆಬ್‌ಸೈಟ್ : kannadauniversity.org


**ನಿರ್ದೇಶಕರು**
ದೂರಶಿಕ್ಷಣ ನಿರ್ದೇಶನಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ,